ಇತ್ತೀಚೆಗೆ ರಾಧಿಕಾ ಪಂಡಿತ್ ಸೋಷಿಯಲ್ ಮೀಡಿಯಾದಲ್ಲಿ ಯಶ್ ಜೊತೆಗಿನ ಒಂದಿಷ್ಟು ಫೋಟೊಗಳನ್ನು ಹಂಚಿಕೊಂಡಿದ್ದರು. ಗಂಡನ ಜೊತೆಗಿನ ಫೋಟೊವನ್ನು ಹಂಚಿಕೊಂಡಿದ್ದರಲ್ಲಿ ಏನು ವಿಶೇಷ ಅಂತೀರಾ? ಆ ಫೋಟೊಗಳಲ್ಲಿ ಖಂಡಿತ ವಿಶೇಷವಿತ್ತು. ಆ ವಿಶೇಷ ಬರೋಬ್ಬರಿ ಹದಿನಾಲ್ಕು ವರ್ಷಗಳ ಹಳೆಯ ಬೇರನ್ನು ಹೊಂದಿತ್ತು. ರಾಧಿಕಾ ಹಂಚಿಕೊಂಡಿದ್ದು, 'ಮೊಗ್ಗಿನ ಮನಸ್ಸು' ಸಿನಿಮಾದ ಚಿತ್ರಗಳನ್ನು. ಅರೆ! ಅವರೇ ಇವರಾ ಎಂಬ ಉದ್ಗಾರ ಹೊರಡಿಸುವಂಥ ಆ ಫೋಟೊಗಳನ್ನು ನೋಡಿ ಯಶ್–ರಾಧಿಕಾ ಅಭಿಮಾನಿಗಳ ಮನಸ್ಸಿನಲ್ಲೂ ಒಮ್ಮೆ 'ಮೊಗ್ಗಿನ ಮನಸ್ಸು' ಸಿನಿಮಾ ರೀಪ್ಲೇ ಆಗಿರಲಿಕ್ಕೆ ಸಾಕು.

ಅತ್ತ ರಾಧಿಕಾ ಸೋಷಿಯಲ್ ಮೀಡಿಯಾದಲ್ಲಿ ನೆನಪುಗಳನ್ನು ಹಂಚಿಕೊಳ್ಳುತ್ತಿದ್ದರೆ ಇತ್ತ 'ಮೊಗ್ಗಿನ ಮನಸ್ಸು' ನಿರ್ದೇಶಕ ಶಶಾಂಕ್ ತಮ್ಮ ಹೊಸ ಸಿನಿಮಾದ ಹಾಡೊಂದನ್ನು ಬಿಡುಗಡೆ ಮಾಡುವುದರ ಮೂಲಕ ಹದಿನಾಲ್ಕರ ಹರೆಯವನ್ನು ಆಚರಿಸಿಕೊಂಡಿದ್ದಾರೆ. ಅಂದಹಾಗೆ ಅವರ ಹೊಸ ಸಿನಿಮಾ ಹೆಸರು ಗೊತ್ತಿದೆಯಲ್ಲ, 'ಲವ್ 360'. ಈ ಸಿನಿಮಾದ 'ಭೋರ್ಗರೆದು...' ಎಂಬ ತಾವೇ ಬರೆದಿರುವ ಹಾಡನ್ನು ಬಿಡುಗಡೆ ಮಾಡಿರುವ ಶಶಾಂಕ್, ಮೊಗ್ಗಿನ ಮನಸ್ಸುಗಳಿಗೆ ಪ್ರೇಮದ ಘಮ ಉಣಿಸಲು ಮುಂದಾಗಿದ್ದಾರೆ. ಈ ಹಾಡಿಗೆ ಅರ್ಜುನ್ ಜನ್ಯ ಸಂಗೀತ ಸಂಯೋಜನೆ ಮಾಡಿದ್ದು, ಕೀರ್ತನ್ ಹೊಳ್ಳ ಹಾಡಿದ್ದಾರೆ.

ರಚನಾ ಇಂದರ್ ಮತ್ತು ಪ್ರವೀಣ್ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ.

'ಭೋರ್ಗರೆದು ಕೇಳಿದೆ ಕಡಲು/ ಬೇರೇನಿದೆ ಇಲ್ಲಿ ಮಿಗಿಲು/ ಒಲವಲ್ಲವೇ ಮನುಜ ನಿನ್ನ ಕಾಯುತಿಹುದು ಹಗಲು ಇರುಳು' ಎಂದು ಪ್ರಾರಂಭವಾಗುವ ಹಾಡು ಪ್ರೇಮದ ಕುರಿತಾಗಿಯಷ್ಟೇ ಅಲ್ಲ, ಮನುಷ್ಯಕುಲಕ್ಕೆ ಯಾವ ಕಾಲಕ್ಕೂ ಬೇಕಾಗಿರುವ ಮಮತೆ, ಕರುಣೆ, ಮಾನವೀಯತೆಯನ್ನು ನೆನಪಿಸುವ ಸಾಲುಗಳನ್ನು ಒಳಗೊಂಡಿದೆ.





ಕಳೆದ ಹನ್ನೊಂದು ವರ್ಷಗಳಿಂದ ಚಿತ್ರರಂಗದಲ್ಲಿ ಇರುವ ರಾಗಿಣಿಗೆ ಸಿನಿಮಾಗಳಲ್ಲಿ ಸಿಕ್ಕಷ್ಟೇ ಪ್ರಸಿದ್ಧಿ ವಿವಾದಗಳ ಮೂಲಕವೂ ಸಿಕ್ಕಿದೆ. ಆದರೆ ಆ ವಿವಾದಗಳು ಅವರನ್ನು ಧೃತಿಗೆಡಿಸಿಲ್ಲ.

'ಹನ್ನೊಂದು ವರ್ಷದ ಈ ಪಯಣದಲ್ಲಿ ನಾನು ಹೊಸ ರೀತಿಯ ಪಾತ್ರಗಳಲ್ಲಿಯೇ ನಟಿಸುತ್ತಾ ಬಂದಿದ್ದೇನೆ. ಕಲಾವಿದರು ಸ್ವಲ್ಪ ರಿಸ್ಕ್ ತಗೊಂಡರೂ ಪರವಾಗಿಲ್ಲ, ಭಿನ್ನ ರೀತಿಯ ಪಾತ್ರಗಳಲ್ಲಿ ಅಭಿನಯಿಸಬೇಕು ಎಂಬುದು ನನ್ನ ಅಭಿಪ್ರಾಯ. ನಾನೂ ಅದನ್ನೇ ಮನಸಲ್ಲಿಟ್ಟುಕೊಂಡು ನಟಿಸುತ್ತಾ ಬಂದಿದ್ದೇನೆ. ಈ ಸಿನಿಮಾದ ಪಾತ್ರವೂ ಅಷ್ಟೇ ಭಿನ್ನವಾಗಿದೆ. ಹಾಗಾಗಿಯೇ ಖುಷಿಯಿಂದ ಒಪ್ಪಿಕೊಂಡು ನಟಿಸಿದ್ದೇನೆ' ಎನ್ನುವ ಅವರಿಗೆ ಸೂಪರ್ ಹೀರೊ ಇಮೇಜ್‌ನ ಪಾತ್ರಗಳೆಂದರೆ ಇಷ್ಟವಂತೆ. ಈ ಸಿನಿಮಾದಲ್ಲಿ ಅದೇ ರೀತಿಯ ಪಾತ್ರ ಸಿಕ್ಕಿರುವುದು ಅವರ ಖುಷಿಗೆ ರೆಕ್ಕೆ ಕಟ್ಟಿದೆ. ಇದೇ ಸಂದರ್ಭದಲ್ಲಿ ಅವರು ತಮ್ಮ ಚಿತ್ರತಂಡ ಮತ್ತು ಸಹಕಲಾವಿದರ ಸಹಕಾರವನ್ನು ನೆನಪಿಸಿಕೊಳ್ಳಲು ಮರೆಯಲಿಲ್ಲ.

ರಾಗಿಣಿ ಜೊತೆ ಅರ್ಜುನ್ ಶರ್ಮಾ ಎಂಬವರು ಈ ಚಿತ್ರದಲ್ಲಿ ತೆರೆಯನ್ನು ಹಂಚಿಕೊಂಡಿದ್ದಾರೆ. ಅವರ ಬಗ್ಗೆಯೂ ರಾಗಿಣಿ ಮೆಚ್ಚುಗೆಯ ಮಾತುಗಳನ್ನು ಆಡಿದ್ದಾರೆ. ರಾಜೀವ್ ಎಮ್ಮಿಗನೂರು ಈ ಚಿತ್ರಕ್ಕೆ ಸಂಗೀತ ಸಂಯೋಜನೆ ಮಾಡಿದ್ದಾರೆ.

ಸದ್ಯದಲ್ಲಿಯೇ ಈ ಚಿತ್ರವನ್ನು ತೆರೆಯ ಮೇಲೆ ತರುವ ಆಲೋಚನೆಯಲ್ಲಿ ಚಿತ್ರತಂಡವಿದೆ.